ಗ್ರಾಮ ವಿಕಾಸ ಯೋಜನೆ

3170 (1531); ಶ್ರೀ ಲಕ್ಷ್ಮಣ ಸಂಗಪ್ಪ ಸವದಿ (ಅಥಣಿ)

ಅ) ರಾಜ್ಯದಲ್ಲಿ ಗ್ರಾಮ ವಿಕಾಸ ಯೋಜನೆ ಜಾರಿಗೆ ತರುವ ಉದ್ದೇಶ ಸರ್ಕಾರಕ್ಕಿದೆಯೆ;

ಆ) ಸದರಿ ಯೋಜನೆಯಲ್ಲಿ ಯಾವ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು;

ಇ) ಹಾಗಿದ್ದಲ್ಲಿ, ಈ ಯೋಜನೆಗೆ ರಾಜ್ಯ ಸರ್ಕಾರ ಬಿಡುಗಡೆ ಮಾಡುವ ಅನುದಾನವೆಷ್ಟು;

ಈ) ಬೆಳಗಾವಿ ಜಿಲ್ಲೆಯ ಎಷ್ಟು ಗ್ರಾಮಗಳಲ್ಲಿ ಗ್ರಾಮ ವಿಕಾಸ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದು (ತಾಲ್ಲೂಕುವಾರು ಹಾಗೂ ಗ್ರಾಮ ಪಂಚಾಯಿತಿವಾರು ವಿವರ ನೀಡುವುದು.)

ಶ್ರೀ ಎಚ್.ಕೆ. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಗ್ರಾಮ ವಿಕಾಸ ಯೋಜನೆ ರಾಜ್ಯದಲ್ಲಿ ಜಾರಿಯಲ್ಲಿದ್ದು, ಯೋಜನೆಯನ್ನು 2014–15ನೇ ಸಾಲಿನಲ್ಲಿ ಘೋಷಣೆ ಮಾಡಿದಂತೆ ರಾಜ್ಯದ 189 ಗ್ರಾಮೀಣ ವಿಧಾನಸಭಾ ಮತಕ್ಷೇತ್ರದ ವ್ಯಾಪ್ತಿಯಲ್ಲಿ 3 ವರ್ಷದೊಳಗೆ ಅನುಷ್ಠಾನ ಮಾಡಲು ದಿನಾಂಕ 20–10–2014 ರಂದು ಸರ್ಕಾರಿ ಆದೇಶ ಹೊರಡಿಸಿ ದಿನಾಂಕ 25–06–2015 ರಂದು ಗ್ರಾಮಗಳ ಆಯ್ಕೆಯೂ ಸೇರಿದಂತೆ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಯೋಜನೆಯ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ.

ಆ) ಕೈಗೆತ್ತಿಕೊಳ್ಳುವ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು ಅನುಬಂಧ–1 ಹಾಗೂ 2 ರಲ್ಲಿ ನೀಡಲಾಗಿದೆ.

ಇ)

- ಗ್ರಾಮ ವಿಕಾಸ ಯೋಜನೆಯ 3 ವರ್ಷಗಳ ಯೋಜನೆಯ ಅಭಿವೃದ್ಧಿಗಾಗಿ ರೂ. 750.00 ಕೋಟಿಗಳನ್ನು ನಿಗದಿಪಡಿಸಿದೆ ಹಾಗೂ
- ಹಿಂದಿನ ಸುವರ್ಣ ಗ್ರಾಮೋದಯ ಯೋಜನೆಯ ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲೂ ಸೇರಿದಂತೆ ಗ್ರಾಮ ವಿಕಾಸ ಯೋಜನೆ ಅನುಷ್ಠಾನಕ್ಕೂ ಈ ಸಾಲಿನಲ್ಲಿ ರೂ. 445.30 ಕೋಟಿಗಳನ್ನು ಆಯವ್ಯಯದಲ್ಲಿ ಮೀಸಲಿಡಲಾಗಿದೆ.

ಈ) ಗ್ರಾಮ ವಿಕಾಸ ಯೋಜನೆಗೆ ಗ್ರಾಮಗಳ ಆಯ್ಕೆ ಪಟ್ಟಿಯನ್ನು ಸಂಬಂಧಪಟ್ಟ ಗ್ರಾಮೀಣ ವಿಧಾನಸಭಾ ಸದಸ್ಯರಿಂದ ಪಡೆದು ಸಲ್ಲಿಸುವಂತೆ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ ಈಗಾಗಲೇ ಸೂಚಿಸಲಾಗಿದೆ.

ಬೆಳಗಾವಿ ಜಿಲ್ಲೆಯಿಂದ ಗ್ರಾಮಗಳ ಆಯ್ಕೆ ಪಟ್ಟಿಯನ್ನು ನಿರೀಕ್ಷಿಸಲಾಗಿದೆ. ಇದಕ್ಕಾಗಿ ಕಾಲಮಿತಿಯನ್ನು ಸಹ ನಿಗದಿಗೊಳಿಸಿ ಮಾರ್ಗಸೂಚಿಯನ್ನು ಎಲ್ಲಾ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳಿಗೆ ತಲುಪಿಸಲಾಗಿದೆ.

ಅನುಬಂಧ-I

ಯೋಜನೆಯಡಿ ಕೈಗೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿಗಳು :

ಕೈಗೊಳ್ಳಬೇಕಾದ ಅಭಿವೃದ್ಧಿ ಕಾಮಗಾರಿಗಳು	ನಿಗಧಿಪಡಿಸಲಾದ ಶೇಕಡಾವಾರು ಮೊತ್ತ
• ಗ್ರಾಮದೊಳಗಿನ ಪರಿಸರವನ್ನು ಉತ್ತಮಪಡಿಸಲು ರಸ್ತೆ, ಚರಂಡಿ (ಸ್ಥಳೀಯ ಅವಶ್ಯಕತೆಯನ್ನು ಆಧರಿಸಿ ಸಿಸಿ ರಸ್ತೆ / ಕಲ್ಲು ಚಪ್ಪಡಿ ರಸ್ತೆಗಳನ್ನು ಗ್ರಾಮ ಪಂಚಾಯತ್‌ಗಳು ನಿರ್ಧರಿಸಿದ ಮಾದರಿಯಲ್ಲಿ).	50%
• ಗ್ರಂಥಾಲಯ / ಸಾಹಿತಿ ಕಲಾವಿದರ ಸ್ಮಾರಕ / ಸಭಾಭವನ / ಬಯಲು ರಂಗಮಂದಿರ ನಿರ್ಮಾಣ.	12%
• ಯುವಕ / ಯುವತಿ ಮಂಡಳಗಳ ಕ್ರೀಡಾ ಚಟುವಟಿಕೆಗಳ ಅಭಿವೃದ್ಧಿಗಾಗಿ ಜಿಮ್ / ಗರಡಿಮನೆ / ಫ್ಲಡ್‌ಲೈಟ್ ಆಟದ ಮೈದಾನ / ದೇಶೀಯ ಕ್ರೀಡೆ ಅಭಿವೃದ್ಧಿ ಚಟುವಟಿಕೆಗಳಿಗೆ	12%
• ಸೌರ ಬೆಳಕು ದೀಪಗಳ ಅಳವಡಿಕೆ / LED ದೀಪಗಳು	3%
• ತಿಪ್ಪೆ / ತಿಪ್ಪೆಗುಂಡಿಗಳ ವೈಜ್ಞಾನಿಕ ಹಾಗೂ ಆಧುನಿಕ ರೀತಿಯಲ್ಲಿ ಸಂಸ್ಕರಣೆ ಮಾಡುವ ಘಟಕಗಳ ನಿರ್ಮಾಣ (ಕೊಪ್ಪಳ ಜಿಲ್ಲೆಯ ಹುಣ್ಸಾಳ ಹಾಗೂ ಗವಗ ಜಿಲ್ಲೆ ಕಣಕಿನ ಕೊಪ್ಪ ಮಾದರಿಯಂತೆ)	10%
• ಗ್ರಾಮ ಪಂಚಾಯತ್ ನಡವಳಿಗಳನ್ನು ಟೆಲಿವಿಷನ್ ಮುಖಾಂತರ — ನೇರಪ್ರಸಾರ ಹಾಗೂ ಮೂಲ ಸೌಕರ್ಯಕ್ಕೆ	2%
• ಗುಡಿ (ಗ್ರಾಮ ದೇವತೆ)/ಮಸೀದಿ/ಚರ್ಚ್‌ಗಳ, ಪುನರುಜ್ಜೀವನ/ಜೀರ್ಣೋದ್ಧಾರ/ ಕಟ್ಟಡ ನಿರ್ಮಾಣಕ್ಕಾಗಿ	6%
• ಫ್ಲೆಕ್ಸಿ ಫಂಡ್	5%

ಅನುಬಂಧ-2

ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾದ ಗ್ರಾಮಗಳಲ್ಲಿ ಮುಖ್ಯಮಂತ್ರಿಗಳ 21 ಅಂಶಗಳ ---- ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಬೇಕಾಗಿರುವ ಪಟ್ಟಿ.

ಕ್ರ. ಸಂ.	ಕಾರ್ಯಕ್ರಮಗಳು	ಅನುಷ್ಠಾನಕ್ಕೆ ತೆಗೆದುಕೊಳ್ಳಲು ನಿಗಧಿಗೊಳಿಸಿದ ಪ್ರಮಾಣ
1	ರೈತರ ಭೂ-ಅಭಿವೃದ್ಧಿ	ಕನಿಷ್ಟ 20 ರೈತರ ಭೂ ಅಭಿವೃದ್ಧಿ
2	ನಮ್ಮ ಹೊಲ-ನಮ್ಮ ದಾರಿ	ಆಯ್ಕೆಯಾದ ಗ್ರಾಮಗಳಲ್ಲಿ ಕನಿಷ್ಠ 20 ಕಿ.ಮೀ. ಹೊಲಕ್ಕೆ ಹೋಗುವ ಮಣ್ಣಿನ ರಸ್ತೆ ನಿರ್ಮಾಣ
3	ರೈತರ ಕಣ	ಕನಿಷ್ಟ 2
4	ಕುರಿ / ದನದ ದೊಡ್ಡಿ	ಕನಿಷ್ಟ 50 ದನದ ಹಾಗೂ ಕುರಿ ದೊಡ್ಡಿ ಅಗತ್ಯತೆ ಆಧರಿಸಿ
5	ನಮ್ಮೂರ ಕೆರೆ	ಕನಿಷ್ಟ 2 ಕೆರೆಗಳ ಪುನಶ್ಚೇತನ
6	ಮನೆಗೊಂದು ಶೌಚಾಲಯ	100% (ಗ್ರಾಮದ ಎಲ್ಲಾ ಮನೆಗಳಿಗೂ ಶೌಚಾಲಯ ಕಡ್ಡಾಯ)
7	ಆಟದ ಮೈದಾನ	ಕನಿಷ್ಟ 2 ಆಟದ ಮೈದಾನ ನಿರ್ಮಾಣ ಮಾಡಬೇಕು. ಅದರಲ್ಲಿ 1 ಆಟದ ಮೈದಾನವನ್ನು ನಿಗಧಿಯಾದ ಶೇ.12 ರ ಅನುದಾನವನ್ನು ಬಳಸಿಕೊಂಡು ಕಡ್ಡಾಯವಾಗಿ ಫ್ಲಡ್ ಲೈಟ್ ಅಳವಡಿಸಬೇಕು
8	ಸ್ಮಶಾನಾಭಿವೃದ್ಧಿ	ಕನಿಷ್ಟ 1 ಸ್ಮಶಾನಾಭಿವೃದ್ಧಿಪಡಿಸುವುದು
9	ನಮ್ಮ ಹಳ್ಳ-ನಮ್ಮ ನೀರು	ಅಂತರ್ಜಲ ಮರುಪೂರಣ ಕಾಮಗಾರಿಗಳನ್ನು ತೆಗೆದುಕೊಳ್ಳುವುದು
10	ರಾಜೀವ್ ಗಾಂಧಿ ಸೇವಾ ಕೇಂದ್ರ	ಅವಶ್ಯಕತೆಗನುಸಾರ ಆಯ್ಕೆಯಾದ ಗ್ರಾಮದ ಗ್ರಾಮ ಪಂಚಾಯತ್-ಕೇಂದ್ರ ಸ್ಥಾನದಲ್ಲಿ ರಾಜೀವ್ ಗಾಂಧಿ ಸೇವಾ ಕೇಂದ್ರ ನಿರ್ಮಾಣ
11	ಕೃಷಿಕ ಮಹಿಳಾ ಸಶಕ್ತೀಕರಣ	2 ರಿಂದ 5 ಗುಂಪುಗಳಿಗೆ ಪ್ರೋತ್ಸಾಹ
12	ರಾಜೀವ್ ಗಾಂಧಿ ಚೈತನ್ಯ ಯೋಜನೆ	50 ಜನರಿಗೆ ಸ್ವ-ಉದ್ಯೋಗ 50 ಜನರಿಗೆ ಉದ್ಯೋಗಾವಕಾಶ
13	ಕೌಶಲ್ಯಾಭಿವೃದ್ಧಿ	50 ಜನರಿಗೆ ತರಬೇತಿ
14	ಶುದ್ಧ ಕುಡಿಯುವ ನೀರಿನ ಘಟಕ	ಆಯ್ಕೆಯಾದ ಗ್ರಾಮದಲ್ಲಿ ಕನಿಷ್ಠ ಒಂದು ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಾಣ ಹಾಗೂ ಕನಿಷ್ಠ 85 LPCD ನೀರು ಒದಗಿಸುವುದು
15	ಸಂಜೀವಿನಿ-ಜೀವನೋಪಾಯ ಅಭಿಯಾನ	100 ಮಹಿಳೆಯರಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಹಾಯಧನ

...2

16	ಕೊಳವೆ ಬಾವಿ ಮರು ಪೂರಣ ಕಾರ್ಯಕ್ರಮ	ಸ್ಥಳೀಯ ಕೊಳವೆ ಬಾವಿ / ತೆರೆದ ಬಾವಿ ಮರು ಪೂರಣ
17	ಫುಟ್‌ಬ್ರಿಡ್ಜ್‌ಗಳ ನಿರ್ಮಾಣ	ಅವಶ್ಯಕತೆಗನುಸಾರ 2 ರಿಂದ 5 ಫುಟ್ ಬ್ರಿಡ್ಜ್‌ಗಳ ನಿರ್ಮಾಣ
18	ಗ್ರಾಮೀಣ ಗೋದಾಮುಗಳ ನಿರ್ಮಾಣ	ಕನಿಷ್ಟ ಒಂದು ಗ್ರಾಮೀಣ ಗೋದಾಮು ನಿರ್ಮಿಸುವುದು
19	ಉದ್ಯಾನವನ ನಿರ್ಮಾಣ / ಸಸಿ ನೆಡುವಿಕೆ	ಅಗತ್ಯತೆ ಆಧರಿಸಿ ಉದ್ಯಾನವನ ನಿರ್ಮಾಣ ಹಾಗೂ ಕನಿಷ್ಟ 1000 ಸಸಿಗಳನ್ನು ಗ್ರಾಮದ ವ್ಯಾಪ್ತಿಯಲ್ಲಿ ನೆಡುವುದು
20	ಸೈಬರ್ / ಕಂಪ್ಯೂಟರ್ ಕೇಂದ್ರಗಳ ಸ್ಥಾಪನೆ	ಅವಶ್ಯಕತೆಗನುಸಾರ ಒಂದು ಸೈಬರ್ / ಕಂಪ್ಯೂಟರ್ ಕೇಂದ್ರಗಳ ಸ್ಥಾಪನೆ
21	ಸಾಂಸ್ಕೃತಿಕ ಕೇಂದ್ರಗಳ ಸ್ಥಾಪನೆ	ಸಾಂಸ್ಕೃತಿಕ ಕ್ಷೇತ್ರದಲ್ಲಿ ಹೆಸರು ಮಾಡಿರುವ ಸ್ಥಳೀಯ ಗಣ್ಯ ವ್ಯಕ್ತಿಗಳ ಹೆಸರಿನಲ್ಲಿ ನಿಗದಿಯಾದ ಶೇ.12ರ ಅನುದಾನವನ್ನು ಬಳಸಿಕೊಂಡು ಆಯ್ಕೆಯಾವ ಗ್ರಾಮದಲ್ಲಿ ಕನಿಷ್ಟ ಒಂದು ಸಾಂಸ್ಕೃತಿಕ ಕೇಂದ್ರದ ಸ್ಥಾಪನೆ